ಬೆಂಗಳೂರಿನಲ್ಲಿರುವ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಆರ್ಥಿಕ ಸ್ಥಿತ

358 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯಲ್ಲಿ ಈಗ ಹಾಲಿ ಇರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಕಳೆದ 5 ವರ್ಷಗಳಲ್ಲಿ ಕಾರ್ಖಾನೆಯ ಆರ್ಥಿಕ ಸ್ಥಿತಿ ಏನಾಗಿದೆ?

ಇ) ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಇಲ್ಲಿನ ಕಾರ್ಮಿಕರನ್ನು ಬೇರೆಡೆಗೆ ಎರವಲು ಸೇವೆ ಆಧಾರದ ಮೇಲೆ ಕಳುಹಿಸಲು ಸರ್ಕಾರ ಯೋಜಿಸಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ, (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) 1768.

ಆ) ಕಳೆದ ಐದು ವರ್ಷಗಳಿಂದ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಕ್ಲಿಷ್ಟಕರವಾಗಿರುವುದರಿಂದ ಕಾರ್ಯಾಚರಣೆಗಳ ಮೇಲೆ ಪ್ರತಿಕೂಲ ವಾತಾವರಣವನ್ನು ಮೂಡಿಸಿತ್ತು. ಸಂಸ್ಥೆಯು ನಿವ್ವಳ ಮೌಲ್ಯದಲ್ಲಿ ಸಂಪೂರ್ಣ ಸವೆತವುಂಟಾಯಿತು.

ಇ) ಸರ್ಕಾರವು ಹಲವಾರು ನೆರವುಗಳನ್ನು ಒದಗಿಸಿದೆ. ಅವುಗಳಲ್ಲಿ ಮೂರು ಕೋಟಿ ರೂ.ಗಳ ಸೀಮಾಂತ ಆರ್ಥಿಕ ಸಹಾಯಕ, 31-3-1997ರವರೆಗೆ ಮಾರಾಟ ತೆರಿಗೆ ಪಾವತಿಯ ಮುಂದೂಡಿಕೆ ಹಾಗೂ ಬ್ಯಾಂಕರುಗಳಿಂದ ಅಧಿಕ ಕಾರ್ಯಾಚರಣೆ ಬಂಡವಾಳವನ್ನು ಪಡೆಯುವ ಸಲುವಾಗಿ ಹದಿನಾಲ್ಕು ಕೋಟಿ ರೂ.ಗಳ ಸರ್ಕಾರಿ ಖಾತ್ರಿಯನ್ನು ನೀಡಲಾಗಿದೆ.

ಈ) ಸಂಸ್ಥೆಯ 59 ಉದ್ಯೋಗಿಗಳನ್ನು ಹಲವಾರು ಸರ್ಕಾರಿ ಇಲಾಖೆಗಳಾದ, ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ಮಾರ್ಕೆಟಿಂಗ್ ಕನ್ಸಲ್ಟೆಂಟ್ ಮತ್ತು ಏಜೆನ್ಸೀಸ್ ನಿಯಮಿತ, ಕೃಷ್ಣ ಭಾಗ್ಯ ಜಲ ನಿಗಮ, ಇತ್ಯಾದಿಗಳಿಗೆ ಪ್ರತಿ ನಿಯೋಜಿತ ಆಧಾರದ ಮೇಲೆ ಕಳುಹಿಸಲು ಸಾಧ್ಯವಾಯಿತು. ಅದೇ ರೀತಿ ಸಂಸ್ಥೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಪ್ರತಿ ನಿಯೋಜಿತ ಆಧಾರದ ಮೇಲೆ ಕಳುಹಿಸುವ ಪ್ರಯತ್ನದಲ್ಲಿಯೂ ಸಹ ನಿರತವಾಗಿದೆ.